# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **(150) 10** |
| **ಸದಸ್ಯರ ಹೆಸರು** | : | **ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **08.12.2025** |
| **ಉತ್ತರಿಸುವ ಸಚಿವರು** | : | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು** |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಪೈಕಿ ಮೂಲಭೂತ ಮೂಲಸೌಕರ್ಯ (ಕಟ್ಟಡ ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಇತ್ಯಾದಿಗಳ) ಕೊರತೆಯಿಂದ ಮುಚ್ಚುವ ಪರಿಸ್ಥಿತಿಗೆ ತಲುಪಿರುವ ಶಾಲೆಗಳ ಒಟ್ಟು ಸಂಖ್ಯೆ ಎಷ್ಟು(ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಪೈಕಿ ಮೂಲಭೂತ ಮೂಲಸೌಕರ್ಯ (ಕಟ್ಟಡ ಕುಡಿಯುವ ನೀರು, ಶೌಚಾಲಯ. ವಿದ್ಯುತ್ ಇತ್ಯಾದಿಗಳ) ಕೊರತೆಯಿಂದ ಮುಚ್ಚುವ ಪರಿಸ್ಥಿತಿಯಲ್ಲಿ ಯಾವುದೇ ಶಾಲೆಗಳು ಇರುವುದಿಲ್ಲ. |
| ಆ | ಶಿಕ್ಷಕರ ಕೊರತೆಯಿಂದ ಅಥವಾ ಖಾಲಿ ಹುದ್ದೆಗಳು ತುಂಬದ ಕಾರಣದಿಂದ ಸರಿಯಾದ ಬೋಧನಾ ಕಾರ್ಯ ನಡೆಯದ ಸರ್ಕಾರಿ ಶಾಲೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) | ಶಿಕ್ಷಕರ ಕೊರತೆಯಿಂದ ಅಥವಾ ಖಾಲಿ ಹುದ್ದೆಗಳು ತುಂಬದ ಕಾರಣದಿಂದ ಸರಿಯಾದ ಬೋಧನಾ ಕಾರ್ಯ ನಡೆಯದ ಸರ್ಕಾರಿ ಶಾಲೆಗಳು ಯಾವುದು ಇರುವುದಿಲ್ಲ. ಖಾಲಿ ಹುದ್ದೆಗಳಿರುವ ಶಾಲೆಗಳಲ್ಲಿ ಅಗತ್ಯತೆಗನುಸಾರವಾಗಿ ಅತಿಥಿ ಶಿಕ್ಷಕರನ್ನು ಒದಗಿಸಲಾಗಿದೆ. |
| ಇ | ಈ ಶಾಲೆಗಳು ಮುಚ್ಚುವ ಪರಿಸ್ಥಿತಿ ಎದುರಿಸದಂತೆ ಸರ್ಕಾರ ತೆಗೆದುಕೊಂಡಿರುವ ತುರ್ತು ಕ್ರಮಗಳು ಯಾವುವು; | ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳು:-<br>• ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ 15000 ಹುದ್ದೆಗಳಿಗೆ ನೇಮಕಾತಿಗಾಗಿ ಕ್ರಮವಹಿಸಲಾಗುತ್ತಿದೆ.<br>• ನೇಮಕಾತಿಗೊಂಡ 12,403 ಶಾಲಾ ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲಾಗಿದೆ.<br>• ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಒಟ್ಟು 34027 ಅತಿಥಿ ಶಿಕ್ಷಕರುಗಳನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳುವ ಮೂಲಕ ಶಿಕ್ಷಕರ ಕೊರತೆಯನ್ನು ನೀಗಿಸಲು ಕ್ರಮವಹಿಸಿದೆ. |

| ಈ | 2024-25ನೇ ಸಾಲಿನಲ್ಲಿ ಮೂಲಸೌಕರ್ಯಗಳ ಕೊರತೆಯಿರುವ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಸರ್ಕಾರ ಮೀಸಲಿಟ್ಟಿರುವ ಬಜೆಟ್ ಅನುದಾನ ಎಷ್ಟು; ಅದರ ಕಾರ್ಯಗತಗೊಳಿಸುವಿಕೆ ಯಾವ ಹಂತದಲ್ಲಿದೆ? |
|---|---|

2024-25ನೇ ಸಾಲಿನಲ್ಲಿ ಮುಂದುವರೆದ ಮತ್ತು ಹೊಸ ಶಾಲಾ ಕೊಠಡಿ ನಿರ್ಮಾಣ, ದುರಸ್ತಿ, ಶೌಚಾಲಯ ನಿರ್ಮಾಣದಂತಹ ಕಾಮಗಾರಿಗಳನ್ನು 642.02 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುವುದು ಎಂದು ಘೋಷಣೆಯಾಗಿದ್ದು, ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ, ಮೂಲಭೂತ ಸೌಲಭ್ಯ ಒದಗಿಸಲು 2024-25ನೇ ಸಾಲಿನಲ್ಲಿ ಕೊಠಡಿಗಳ ನಿರ್ಮಾಣ, ಕೊಠಡಿಗಳ ದುರಸ್ತಿ, ಶೌಚಾಲಯ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆಯಾಗಿರುತ್ತದೆ.

**ಸರ್ಕಾರಿ ಶಾಲೆಗಳ ಕೊಠಡಿಗಳ ನಿರ್ಮಾಣ :**

**(ರೂ.ಲಕ್ಷಗಳಲ್ಲಿ)**

| ಯೋಜನೆ ಮಂಜೂರಾದ ವರ್ಷ | ಯೋಜನೆ | ಮಂಜೂರಾದಕಾಮಗಾರಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆ ಮಾಡಲಾದ ಅನುದಾನ |
|---|---|---|---|---|
| **2024-25** | ಮುಂದುವರೆದ ಯೋಜನೆ | **784** | **11529.65** | **10362.47** |

**ಸರ್ಕಾರಿ ಶಾಲೆಗಳ ಕೊಠಡಿಗಳ ದುರಸ್ತಿ: (ರೂ.ಲಕ್ಷಗಳಲ್ಲಿ)**

| ವರ್ಷ | ಮಂಜೂರಾದ ಶಾಲೆಗಳು | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|
| **2024-25** | **5744** | **15129.66** | **15129.66** |
| **2024-25 (SCP/TSP)** | **94** | **170.00** | **170.00** |
| ಒಟ್ಟು | **5838** | **15299.66** | **15299.66** |

**ಶೌಚಾಲಯ ನಿರ್ಮಾಣ : (ರೂ.ಲಕ್ಷಗಳಲ್ಲಿ)**

| **ವರ್ಷ** | **ಬಿಡುಗಡೆಯಾದ ಅನುದಾನ** |
|---|---|
| **2024-25** | 12106.05 |

ಕೇಂದ್ರ ಪುರಸ್ಕೃತ ಯೋಜನೆಯಾದ ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ 2024-25 ನೇ ಸಾಲಿನಲ್ಲಿ ಮೂಲಸೌಕರ್ಯಗಳ ಅನುಷ್ಠಾನಕ್ಕಾಗಿ ಯೋಜಿಸಿದ ಒಟ್ಟಾರೆ ಅನುದಾನ ರೂ.3364.92 ಲಕ್ಷಗಳು ನಿಗಧಿಯಾಗಿದ್ದು, ಅನುಮೋದಿತ ಕ್ರಿಯಾಯೋಜನೆಯಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

**ಇಪಿ 364 ಯೋಸಕ 2025**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**